ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 24–11–2020

# ಪತ್ರಿಕಾ ಪ್ರಕಟಣೆ

## ಸರ್ಕಾರಿ ಶಾಲೆ ದತ್ತು: ದೇಶದಲ್ಲಿಯೇ ಮಾದರಿ ಯೋಜನೆ –ಮುಖ್ಯಮಂತ್ರಿ.ಬಿ.ಎಸ್.ಯಡಿಯೂರಪ್ಪ

ಬೆಂಗಳೂರು, ನವೆಂಬರ್ 24 (ಕರ್ನಾಟಕ ಸರ್ಕಾರ):

ದೇಶದಲ್ಲಿಯೇ ಪ್ರಥಮ ಬಾರಿಗೆ ಚುನಾಯಿತ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಂಡು ಶಾಲೆಯ ಸರ್ವಾಂಗಿಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದು ಅತ್ಯಂತ ಹರ್ಷದಾಯಕ ವಿಷಯ ಹಾಗೂ ಇದು ದೇಶದ ಇತರೆ ರಾಜ್ಯಗಳಿಗೂ ಸಹ ಮಾದರಿ ಯೋಜನೆಯಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹರ್ಷ ವ್ಯಕ್ತಪಡಿಸಿದರು.

ಇಂದು ವಿಧಾನಸೌಧದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ ಹಮ್ಮಿಕೊಳ್ಳಲಾಗಿದ್ದ “ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ ಸಮಾರಂಭ”ದಲ್ಲಿ ಈ ನೂತನ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು ಇಂತಹ ಸಾಮಾಜಿಕ ಕಳಕಳಿಯ ಯೋಜನೆಗೆ ಚಾಲನೆ ನೀಡುತ್ತಿರುವುದು ತೃಪ್ತಿ ತಂದಿದೆ ಎಂದು ಹೇಳಿದರು.

ಶಾಲೆಗಳ ಅಭಿವೃದ್ಧಿಗಾಗಿ ಜನಪ್ರತಿನಿಧಿಗಳು ಕಂಕಣಬದ್ಧರಾಗಿರುವುದು ಮತ್ತು ಅನೇಕ ಶಿಕ್ಷತಜ್ಞರು ಸಹ ಶಾಲೆಗಳನ್ನು ದತ್ತು ಪಡೆಯುವದರ ಮೂಲಕ ಅಲ್ಲಿನ ಅಭಿವೃದ್ಧಿಗಾಗಿ ಮುಂದೆ ಬಂದಿರುವುದು ಅತ್ಯಂತ ಹರ್ಷದಾಯಕ ವಿಷಯ. ದತ್ತು ಪಡೆದವರು ಪ್ರತಿ ಮೂರ್ನಾಲ್ಕು ತಿಂಗಳಿಗೊಮ್ಮೆ ಶಾಲೆಗೆ

ಬೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಜೊತೆ ಚರ್ಚೆ ಮಾಡುವುದು ಅತ್ಯಂತ ಆರೋಗ್ಯಕರ ವಿಷಯ ಎಂದು ಹೇಳಿದರು.

ಇದರಿಂದ ಅಲ್ಲಿನ ವ್ಯವಸ್ಥೆಯನ್ನು ನೇರವಾಗಿ ನೋಡಿದಂತಾಗುತ್ತದೆ ಮತ್ತು ಅವರ ಇಷ್ಟ-ಕಷ್ಟಗಳನ್ನು ಅರಿತುಕೊಂಡಂತಾಗುತ್ತದೆ. ವಿದ್ಯಾರ್ಥಿಗಳ ಪಾಲಕರೊಂದಿಗೆ ಸಹಚರ್ಚಿಸಿ ಶಿಕ್ಷಣದ ಮಹತ್ವವನ್ನು ಅವರಿಗೆ ತಿಳಿ ಹೇಳಿ ಪ್ರೇರಣೆ ನೀಡಿದಲ್ಲಿ ಈ ಯೋಜನೆ ಸಾರ್ಥಕವಾಗುತ್ತದೆ.

ಅನೇಕ ಹಿರಿಯರು, ಶಿಕ್ಷಣ ತಜ್ಞರು, ರಾಜಕಾರಣಿಗಳು ಇಂದು ಶಾಲೆಗಳನ್ನು ದತ್ತು ತೆಗೆದುಕೊಂಡಿರುವುದು ಅನೇಕರಿಗೆ ಮಾದರಿಯಾಗಲಿ, ಇದರಿಂದ ಪ್ರೇರಣೆಗೊಂಡು ಅವರು ಸಹ ಶಲೆಗಳನ್ನು ದತ್ತು ಪಡೆದುಕೊಳ್ಳಲಿ ಎಂದು ಹೇಳಿದರು.

ರಾಜ್ಯದಲ್ಲಿನ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಾಗಿ ಸರ್ಕಾರದ ಮಟ್ಟದಲ್ಲಿ ಶಿಕ್ಷಣ ಸುಧಾರಣೆಗಳ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಎಂ.ಆರ್. ದೊರೆಸ್ವಾಮಿ ಅವರು ಉತ್ತಮ ಸಲಹೆ ಸೂಚನೆಗಳನ್ನು ಮತ್ತು ಮಾರ್ಗದರ್ಶನವನ್ನು ನೀಡುತ್ತಿದ್ದಾರೆ ಎಂದು ಮುಖ್ಯಮಂತ್ರಿಗಳು ಅವರನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಶಿಕ್ಷಣ ಸುಧಾರಣಾ ಶಿಫಾರಸ್ಸುಗಳ ಕುರಿತ ಪುಸ್ತಕ ಬಿಡುಗಡೆ ಮಾಡಿದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶ್ ಕುಮಾರ್ ಮಾತನಾಡುತ್ತಾ ನಮ್ಮ ಸರ್ಕಾರಿ ಶಾಲೆಗಳನ್ನು ಉಳಿಸಬೇಕು, ಬೆಳೆಸಬೇಕು ಎಂಬದು ನನ್ನ ಆಶಯವಾಗಿದ್ದು, ಇಂತಹ ವಿನೂತನ ಕಾರ್ಯಕ್ರಮದ ಚಾಲನೆಯಿಂದ ಕಂಡಿದ್ದ ಕನಸು ನನಸಾಯಿತು ಎಂದು ಹರ್ಷವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಶಿಕಾರಿಪುರದ 10ಶಾಲೆಗಳನ್ನು, ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ 5 ಶಾಲೆಗಳನ್ನು, ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು 5 ಶಾಲೆಗಳನ್ನು ಹಾಗೂ ಸಚಿವ ಸುರೇಶ್ ಕುಮಾರ್ ಅವರು 5 ಶಲೆಗಳನ್ನು ದತ್ತು ಸ್ವೀಕರಿಸಿದ್ದಾರೆ.

ಶಿಕ್ಷಣ ಸುಧಾರಣೆಗಳ ಸಲಹೆಗಾರರಾದ ಎಂ.ಆರ್. ದೊರೆಸ್ವಾಮಿ ಅವರು ಮಾತನಾಡುತ್ತಾ ದತ್ತು ಪಡೆದ ಸರ್ಕಾರಿ ಶಾಲೆಗಳಲ್ಲಿ ಅಭಿವೃದ್ಧಿಪಡಿಸಬೇಕಾದ ಅಂಶಗಳಲ್ಲಿ ಮೊದಲನೇ ಹಂತವಾಗಿ ಸುರಕ್ಷಿತ ಕುಡಿಯುವ ನೀರು, ಶೌಚಾಲಯಗಳು(ಬಾಲಕ, ಬಾಲಕಿಯರಿಗೆ ಪ್ರತ್ಯೇಕ), ಬೇಡಿಕೆಗೆ ಅನುಗುಣವಾಗಿ ತರಗತಿಗಳ ಕೊಠಡಿಗಳು, ಗ್ರಂಥಾಲಯ, ಬೇಡಿಕೆಗೆ ಅನುಗುಣವಾಗಿ

ಪೀಠೋಪಕರಣಗಳು, ಡಿಜಿಟಲೈಜೇಶನ್, ಕಟ್ಟಡದ ದೃಡತೆ ಮುಂತಾದವುಗಳ ಒಂದು ಪಟ್ಟಿ ಇದೆ ಎಂದು ತಿಳಿದರು. ಜ್ಞಾನಪೀಠ ಪ್ರಶಸ್ತಿ ಕನ್ನಡಿಗರಿಗೆ ಬಂದಿದೆ. ಜ್ಞಾನಪೀಠ ಪ್ರಶಸ್ತಿ ಪಡೆದ ಕಾಲೇಜುಗಳಿಗೆ ಪ್ರಾಧ್ಯಾನತೆ ನೀಡಿ ಮಾದರಿ ಶಾಲೆ ಮಾಡಬೇಕು ಎಂದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಸ್ವಾಗತಭಾಷಣ ಮಾಡಿದರು. ಶಿವಾಜಿನಗರ ವಿಧಾನಸಭಾ ಕ್ಷೇತ್ರದ ರಿಜ್ವಾನ್ ಅರ್ಷದ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಉಪಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶ್ ಕುಮಾರ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ವಿ.ಅನ್ಬುಕುಮಾರ್ ಹಲವು ಗಣ್ಯರು ಉಪಸ್ಥಿತರಿದ್ದರು.

## ಯಕ್ಷೋಪಾಸಕರು ಮೂರನೇ ಸಂಪುಟಕ್ಕೆ ಕಲಾವಿದರ ಮಾಹಿತಿ ನೀಡಲು ಮನವಿ
(ಪಡುವಲಪಾಯ– ತೆಂಕು, ಬಡಗು, ಬಡಾಬಡಗು, ಮೂಡಲಪಾಯ, ಕೇಳಿಕೆ, ಘಟ್ಟದಕೋರೆ)

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):**

ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು 'ಯಕ್ಷೋಪಾಸಕರು' ಎಂಬ ಶೀರ್ಷಿಕೆಯಡಿಯಲ್ಲಿ ಈಗಾಗಲೇ ಎರಡು ಸಂಪುಟಗಳನ್ನು ಹೊರತಂದಿದೆ. ಅದರಲ್ಲಿ ಸೇರ್ಪಡೆಯಾಗದೇ ಇರುವ ಕಲಾವಿದರನ್ನು ಒಳಗೊಳ್ಳುವಂತೆ ಮುಂದಿನ ಸಂಪುಟವನ್ನು ತರುವಯೋಜನೆ ಇದೆ. ಯಕ್ಷಗಾನರಂಗದಲ್ಲಿ ತೊಡಗಿಸಿಕೊಂಡ ವೃತ್ತಿಪರ ಕಲಾವಿದರು ಮತ್ತು ಹವ್ಯಾಸಿ ಕಲಾವಿದರ ಕುರಿತ ವ್ಯಕ್ತಿಚಿತ್ರ ಈ ಸಂಪುಟದಲ್ಲಿ ಇರುತ್ತದೆ. ಕಳೆದ ಐದು ವರ್ಷಗಳಿಂದ ಯಕ್ಷಗಾನದಲ್ಲಿ ನಿರಂತರವಾಗಿ ತೊಡಗಿಸಿಕೊಂಡ ಎಲ್ಲ ಯಕ್ಷಗಾನದ ಕಲೋಪಾಸಕರೂ ಕೂಡಾ (ಶಾಲಾ ಕಾಲೇಜು ವಿದ್ಯಾರ್ಥಿಗಳನ್ನು ಹೊರತುಪಡಿಸಿ)ತಮ್ಮ ವಿವರಗಳನ್ನು ಅಕಾಡೆಮಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆ ತಿಳಿಸಿದೆ.

ವಿವರಗಳನ್ನು ನೀಡುವಾಗ ಹೆಸರು, ಹುಟ್ಟಿದ ದಿನಾಂಕ, ತಂದೆತಾಯಿಯ ಹೆಸರು, ಗುರುಗಳು ಮತ್ತು ಕಲಿತಕೇಂದ್ರ, ಪ್ರಧಾನವಾಗಿ ಕಾಣಿಸಿಕೊಂಡ ಪಾತ್ರಗಳು,ತಿರುಗಾಟ ಮಾಡಿದ ಮೇಳಗಳು, ಹವ್ಯಾಸಿಗಳಾಗಿದ್ದಲ್ಲಿ ಸಂಸ್ಥೆ/ ತಂಡದ ಹೆಸರು, ಪ್ರದರ್ಶನಗಳನ್ನು ನೀಡಿದ ವಿವರ, ದೊರೆತ ಗೌರವ ಪುರಸ್ಕಾರಗಳು, ವಿವಾಹಿತರಾಗಿದ್ದಲ್ಲಿ ಸಂಗಾತಿ ಮತ್ತು ಮಕ್ಕಳ ಹೆಸರು, ಒಂದು ಒಳ್ಳೆಯ ಫೋಟೋ. ಲೇಖನ ರೂಪದಲ್ಲಿ ಕಿರುಪರಿಚಯ ಇದ್ದರೆ ಅದನ್ನು ಲಗತ್ತಿಸಿ ಕೊಡುವಂತೆ ಕೋರಲಾಗಿದೆ.

ವಿವರಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಎರಡನೇ ಮಹಡಿ, ಚಾಲುಕ್ಯ ವಿಭಾಗ, ಜೆ.ಸಿ.ರಸ್ತೆ, ಬೆಂಗಳೂರು– 560002 ಇವರಿಗೆ ದಿನಾಂಕ ಡಿಸೆಂಬರ್ 15 ರೊಳಗೆ ಕಳುಹಿಸಬಹುದು.

## ಡಿಸೆಂಬರ್ 7 ರಂದು ವಿಧಾನಸಭೆ ಅಧಿವೇಶನ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):**

15 ನೇ ವಿಧಾನಸಭೆಯ ಎಂಟನೇ ಅಧಿವೇಶನವು ಸೋಮವಾರ ಡಿಸೆಂಬರ್ 7, 2020 ರಂದು ಬೆಳಿಗ್ಗೆ 11–00 ಗಂಟೆಗೆ ಬೆಂಗಳೂರಿನಲ್ಲಿರುವ ವಿಧಾನಸೌಧದದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ರಾಜ್ಯ ಸಭೆಗೆ ನಾರಾಯಣಪ್ಪ ಕೊರಗಪ್ಪ ಅವಿರೋಧ ಆಯ್ಕೆ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):**

ಕರ್ನಾಟಕ ವಿಧಾನ ಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ ಒಬ್ಬ ಸದಸ್ಯರನ್ನು ಆಯ್ಕೆಮಾಡಲು ಉಪ ಚುನಾವಣೆಯನ್ನು 1–12–2020 ರಂದು ನಿಗದಿಪಡಿಸಲಾಗಿತ್ತು. ನಾಮಪತ್ರ ಹಿಂಪಡೆಯಲು 23–11–2020 ಕೊನೆಯ ದಿನವಾಗಿತ್ತು. ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ನಾರಾಯಣ ಕೊರಗಪ್ಪ ಅವರು ಮಾತ್ರ ಅಂತಿಮವಾಗಿ ಚುನಾವಣಾ ಕಣದಲ್ಲಿ ಉಳಿದಿರುತ್ತಾರೆ. ಆದ್ದರಿಂದ ಇವರನ್ನು ಅವಿರೋಧವಾಗಿ ರಾಜ್ಯ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಆಯ್ಕೆಯಾಗಿರುತ್ತಾರೆಂದು ಘೋಷಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):**

ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ. ಗೋಪಾಲಯ್ಯ ಅವರು ನವೆಂಬರ್ 26 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):**

ನಗರಾಭಿವೃದ್ಧಿ ಸಚಿವ ಬಿ. ಎ. ಬಸವರಾಜ ಅವರು ನವೆಂಬರ್ 24 ಹಾಗೂ 25 ರಂದು ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದು ನವೆಂಬರ್ 25 ರಂದು ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## 80 ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ):**

"ಸಂವಿಧಾನ ದಿವಸ" ವಾದ ನವೆಂಬರ್ 26 ರ ಹಿನ್ನೆಲೆಯಲ್ಲಿ ಗುಜರಾತ್ ರಾಜ್ಯದ ಕೆವಾಡಿಯಾದಲ್ಲಿ ನವೆಂಬರ್ 25–26, 2020 ರಂದು ನಡೆಯಲಿರುವ "80 ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನ"ದಲ್ಲಿ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭಾಗವಹಿಸಲಿದ್ದಾರೆ.

ಸಮ್ಮೇಳನದಲ್ಲಿ "ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಪ್ರಜಾಪ್ರಭುತ್ವವು ಸದೃಢ ಸಾಮರಸ್ಯದ ಸಮನ್ವಯಕ್ಕೆ ಬುನಾದಿ" ಎಂಬ ವಿಷಯದ ಬಗ್ಗೆ ನಡೆಯಲಿರುವ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿರುವರು.

ಈ ಸಮ್ಮೇಳನವನ್ನು ಭಾರತದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ನವೆಂಬರ್ 25, 2020 ರಂದು ಉದ್ಘಾಟಿಸಲಿದ್ದು, ನವೆಂಬರ್ 26, 2020 ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸಲಿದ್ದಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳ ದಾಖಲಾತಿಗಳ ಪರಿಶೀಲನೆ

**ಬೆಂಗಳೂರು, ನವೆಂಬರ್ 25 (ಕರ್ನಾಟಕ ವಾರ್ತೆ)**

**ದಿನಾಂಕ 19-11-2020 ರಂದು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಿರುವ ಅರ್ಹತಾ ಪಟ್ಟಿಯಂತೆ ಮೂಲದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳು ಸದರಿ ಹುದ್ದೆಗಳ ಆನ್‌ಲೈನ್ ಅರ್ಜಿಯಲ್ಲಿ ಕೋರಲಾದ ಮೀಸಲಾತಿಗನುಗುಣವಾಗಿ ಪೂರಕ ಪ್ರಮಾಣ ಪತ್ರಗಳು, ಜನ್ಮದಿನಾಂಕ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪೂರಕ ಪ್ರಮಾಣ ಪತ್ರಗಳ ಮೇಲೆ ನಿಮ್ಮ ಸಹಿ, ಹೆಸರು ನೋಂದಣಿ ಸಂಖ್ಯೆಯನ್ನು ನಮೂದಿಸಿದ ಸ್ವಯಂ ದೃಢೀಕೃತ ಎರಡು ಜೆರಾಕ್ಸ್ ಪ್ರತಿಗಳನ್ನು ಎರಡು ಭಾವಚಿತ್ರ ಅರ್ಜಿ/ಪ್ರವೇಶ ಪತ್ರದ ಪ್ರತಿಗಳು ಮತ್ತು ಯಾವುದಾದರೊಂದು ಗುರುತಿನ ಚೀಟಿಯೊಂದಿಗೆ ಅಭ್ಯರ್ಥಿಗಳು ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು -1 ವಿಳಾಸಕ್ಕೆ 5-12-2020 ರೊಳಗಾಗಿ ತಲುಪಿಸಲು ಆಯೋಗದ ಪ್ರಕಟಣೆ ತಿಳಿಸಿದೆ.**